ಆತ್ಮೀಯತೆಯನ್ನು ಬೆಳೆಸಿಕೊಂಡಿದ್ದರು.

ನಾನು ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಗಿರೀಶ ಮತ್ತು ಮೋಹನ್ ರಾಕೇಶ್ ಅವರ ಬಗ್ಗೆ ಹಿಂದಿಯಲ್ಲಿ ಕೃತಿ ರಚಿಸುತ್ತಿದ್ದೆ. ಆ ಸಮಯದಲ್ಲಿ ನಾವು ಮತ್ತಷ್ಟು ಸಮೀಪದವರಾದೆವು. ಪ್ರತಿ ಸಲವೂ ಅವರ ಕುಟುಂಬದ ಬಗ್ಗೆ, ಬದುಕಿನ ಬಗ್ಗೆ, ಕೃತಿಗಳ ಬಗ್ಗೆ ಕೇಳಿದ ಯಾವ ಪ್ರಶ್ನೆ, ಸಂದೇಹದ ಬಗೆಗೂ ಎಂದೂ ಬೇಸರಗೊಳ್ಳಲಿಲ್ಲ. ತಮ್ಮ ವಿದ್ಯಾರ್ಥಿ ಜೀವನದ ಕಾಲದಿಂದಲೂ ಮನೆಯಲ್ಲಿದ್ದ ತಮ್ಮ ಹಳೆಯ ಪುಸ್ತಕ, ವಸ್ತುಸಂಗ್ರಹ, ವೈಯಕ್ತಿಕ ಬದುಕಿನ ಹಲವಾರು ಪ್ರಸಂಗ ಯಾವುದನ್ನೂ ಮುಚ್ಚಿಡದೇ ಹೇಳುತ್ತಿದ್ದರು. ಡಾ. ರಘುನಾಥರಿಗೆ ಹೇಳಿ ಅವರ ಸಂಗ್ರಹಗಳನ್ನೂ ತೆರೆದು ತೋರಿಸುತ್ತಿದ್ದರು.

ಮನೆ ಪ್ರವೇಶಿಸಿದೊಡನೆ, ಮುಂಬಾಗಿಲದಲ್ಲಿಯೇ, ಎಡಭಾಗದಲ್ಲಿ, ಡೊಳ್ಳಾರಿಯಂಥ ಒಂದು ದೊಡ್ಡ ಸಂದುಕ ಇಡಲಾಗಿತ್ತು. ಗಿರೀಶ ಅಥವಾ ರಘುನಾಥರು ನಮ್ಮೊಡನೆ ಮಾತನಾಡುತ್ತ ಅದರ ಮೇಲೆಯೇ ಕುಳಿತಿರುತ್ತಿದ್ದರು. ಇಬ್ಬರೂ ಎತ್ತರದ ನಿಲುವಿನವರೇ. ಹಳೆಯ ಕಾಲದ ಉತ್ತಮ ಸಾಗವಾನಿ ಕಟ್ಟಿಗೆಯಿಂದ ಮಾಡಿದ ಆ ಸಂದುಕದ ಮೇಲೆ ಸಹಜವಾಗಿ, ಆರಾಮವಾಗಿ ಇಬ್ಬರು ಮಲಗಬಹುದಾಗಿತ್ತು. ಆ ಪೆಟ್ಟಿಗೆಗೆ ಹಾಕಿದ ಹಿತ್ತಾಳೆಯ ಭಾರವಾದ ಚಿಲಕವೂ ಕೀಲಿಯೂ ಒಂದು ಶತಮಾನದ ಅಸಂಖ್ಯ ವಸ್ತು, ವಸ್ತ್ರ, ಪುಸ್ತಕ, ಹಸ್ತಪ್ರತಿ ಮುಂತಾದುವುಗಳನ್ನು ಸುರಕ್ಷಿತವಾಗಿ ಕಾಪಾಡಿಕೊಂಡಿದ್ದುವು. ಸಾಮಾನ್ಯವಾಗಿ ರಘುನಾಥರು, ಗಿರೀಶ ಮಾತ್ರ ತೆರೆದು ನೋಡಬಹುದಾದ ಆ ಪೆಟ್ಟಿಗೆಯನ್ನು, ಬೇಕನಿಸಿದಾಗ ತೆರೆದು ನೋಡಲು ನನಗೆ ಅವಕಾಶ ಮಾಡಿದ್ದರು. ಅದರ ಹಿಂದೆಯೇ ಇದ್ದ ರಘುನಾಥರ ಬೆಡ್‌ರೂಮಿನ ಹೊರಬಾಗಿಲವನ್ನು ಕಾಯಂ ಆಗಿ ಮುಚ್ಚಿಡುವ ಕೆಲಸವನ್ನೂ ಆ ಪೆಟ್ಟಿಗೆ ಮಾಡುತ್ತಿತ್ತು. ಅದರ ನೇರ ಎದುರಿನ ಬಲಬದಿಯ ಕೋಣೆ ಗಿರೀಶರದು. ಅವರ ಬಹುಪಾಲು ಬರವಣಿಗೆ ಅಲ್ಲಿಟ್ಟಿದ್ದ ಪುಟ್ಟ ಮೇಜಿನ ಮೇಲೆಯೇ ನಡೆಯುತ್ತಿತ್ತು. ಬಹುಶಃ ಶಿರಸಿಯಲ್ಲಿ ಇದ್ದಾಗಲೇ ಮಾಡಿಸಿಕೊಂಡಿರಬಹುದಾಗಿದ್ದ ಆ ಬೆಲೆಯುಳ್ಳ ಬಹೂಪಯೋಗಿ ಪೆಟ್ಟಿಗೆಯ ಮೇಲೆ ಪೇಟೆಯಿಂದ ಬಂದ ಕೂಡಲೇ ತಂದ ಎಲ್ಲ ವಸ್ತುಗಳನ್ನು ಒಟ್ಟುತ್ತಿದ್ದರು. ದಣಿವಾರಿಸಿಕೊಳ್ಳಲು ಅದರ ಮೇಲೆ ಕೂಡುತ್ತಿದ್ದರು. ಹೊರಭಾಗದಲ್ಲಿ ಬಂದಿದ್ದ ಅತಿಥಿ ಬಂಧುಗಳಿಗೆ ಸರಬರಾಜು ಮಾಡಲು ಒಳಕೋಣೆ ಅಥವಾ ಅಡುಗೆಮನೆಯಿಂದ ತರುವ ಸಕಲ ವಸ್ತುಗಳನ್ನೂ ಅದರ ಮೇಲೆಯೇ ಇಡುತ್ತಿದ್ದರು.

ಗಿರೀಶ ಕಲಿತಿದ್ದ ಶಾಲಾ ಪಠ್ಯಪುಸ್ತಕಗಳು, ಬರೆದ ಡೈರಿಗಳು, ಹಸ್ತಪ್ರತಿಯಾಗಿಯೇ ಉಳಿದಿದ್ದ ಇಂಗ್ಲಿಷ್, ಕನ್ನಡ, ಕೊಂಕಣಿ ಕವಿತೆಗಳು, ಡಚ್ ಪೇಂಟರ್ ವಿನ್ಸೆಂಟ್ ವ್ಯಾನ್ ಗೋನ ಪೇಂಟಿಂಗ್ಸ್ ಅಲ್ಬಮ್, ಜೊತೆಗೆ ಗಿರೀಶ ಮಾಡಿದ ವಾಟರ್ ಕಲರ್ ಪೇಂಟಿಂಗ್ಸ್, ಸ್ಕೆಚಿಸ್, ಚಿತ್ರ ಬಿಡಿಸುವ ಬಣ್ಣದ ಪೆನ್ಸಿಲ್‌ಪೆಟ್ಟಿಗೆ, ಕುಂಚ ಇತ್ಯಾದಿ ಅಲ್ಲಿದ್ದುವು; ಎ.ಸಿ. ಬ್ರೌನ್, ಐರಿಶ್ ನಾಟಕಕಾರ ಸೀನ್ ಓ'ಕ್ಯಾಸಿ, ಟಿ.ಎಸ್. ಎಲಿಯಟ್, ಡಬ್ಲ್ಯೂ.ಎಚ್. ಆಡೆನ್, ಅರ್ನಾಲ್ಡ್ ಟಾಯ್ನಬೀ, ಡಬ್ಲ್ಯೂ. ಸಾಮರ್ಸೆಟ್ ಮಾಮ್, ಪರ್ಲ್ ಎಸ್. ಬಕ್, ಅಗಾಥಾ ಕ್ರಿಸ್ಟೀ, ಎಸ್. ರಾಧಾಕೃಷ್ಣನ್, ಎ. ಐನ್‌ಸ್ಟಾಯಿನ್, ಪಿ.ಜಿ. ವೋಡ್‌ಹೌಸ್, ಡಿ.ಕೆ. ಕರ್ವೆ, ಸಿ.ಜಿ. ಯುಂಗ್, ಜಿ.ಎಸ್. ಸರದೇಸಾಯಿ, ಕಿಂಗ್ ಕಾಂಗ್ ಆಫ್ ಹಂಗರಿ, ಟಾವ್ ಜಾನ್‌ಸನ್, ವಾಲ್ಟರ್ ಡಿ ಲಾ ಮೇರ್ ಮುಂತಾದ ಕೆಲವು ಪ್ರಮುಖ ಲೇಖಕರಿಗೆ, ವ್ಯಕ್ತಿಗಳಿಗೆ ಗಿರೀಶ ಬರೆದ ಪತ್ರಗಳಿಗೆ, ಸ್ಕೆಚ್‌ಗಳಿಗೆ ಆ ಮಹನೀಯರು ತಮ್ಮ ಕೈಯಿಂದ ಬರೆದು ಉತ್ತರಿಸಿದ ಪತ್ರಗಳು, ಹರಸಿದ ಶುಭಾಶಯಗಳು ಜೀವಂತವಾಗಿದ್ದುವು. ಸ್ಕೂಲು–ಕಾಲೇಜು ಜೀವನದಲ್ಲಿ ಪ್ರಕಟವಾಗಿದ್ದ ಗಿರೀಶರ ಲೇಖನಗಳು, ಕವಿತೆಗಳಿದ್ದ ಮಿಸಲೆನಿಗಳು, ತಮ್ಮ ಪ್ರೀತಿಯ ಪೇಂಟರ್ ವ್ಯಾನ್ ಗೋನ ಬಗ್ಗೆ ಬರೆದ ಬಹಳಷ್ಟು ಅಪ್ರಕಟಿತ ಇಂಗ್ಲಿಷ್ ಕವಿತೆಗಳು, ಕೆಲವು ಕ್ರೈಸ್ತ ಮಿಶನರಿಗಳ ಭಾವಚಿತ್ರಗಳು, ನೋಟ್‌ಬುಕ್‌ಗಳಲ್ಲಿ, ಡೈರಿಯಂಥ ಪುಸ್ತಕಗಳ ಖಾಲಿ ಹಾಳೆಗಳಲ್ಲಿ ಮೂಡಿಸಿದ ಅನೇಕ ರೇಖಾಚಿತ್ರಗಳು ಮುಂತಾದ ಅಸಂಖ್ಯ ವಸ್ತುಗಳು ತುಂಬಿದ್ದುವು. ಮನೆಮಂದಿಗೆ ಅಷ್ಟು ಮಹತ್ವದ್ದೆನಿಸಿರದ, ಆದರೆ ಬಹಳ ಬೆಲೆಯುಳ್ಳ ಕಾರ್ನಾಡ ಕುಟುಂಬದ ಚರಿತ್ರೆಯ ಉಗ್ರಾಣವೇ ಅಲ್ಲಿತ್ತು. ಪ್ರತಿದಿನವೂ ವಾಟರ್ ಕಲರ್ ಚಿತ್ರ ಮಾಡುವ, ರೇಖಾಚಿತ್ರಗಳನ್ನು ಬಿಡಿಸುವ ಹವ್ಯಾಸ ಗಿರೀಶರಿಗೆ ಚಟದಂತೆ ಅಂಟಿಕೊಂಡು